ಕರ್ನಾಟಕ ಸರ್ಕಾರ

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 836 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಸ್.ವಿ. ಸಂಕನೂರ, (ಪದವೀಧರರ ಕ್ಷೇತ್ರ). |
| ಉತ್ತರಿಸುವ ಸಚಿವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 20.12.2021 |

| ಕ್ರಮ. ಸಂಖ್ಯೆ. | ಪ್ರಶ್ನೆ | ಉತ್ತರ |
|---|---|---|
| 1 | ಪ್ರಸ್ತುತ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷರು ಹಾಗೂ ಸದಸ್ಯರ ಅಧಿಕಾರ ಅವಧಿ ಎಷ್ಟು; ಪ್ರಸ್ತುತ ಅಧಿಕಾರವಧಿ ಮುಕ್ತಾಯವಾಗುವುದು ಯಾವಾಗ; | ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷರು ಹಾಗೂ ಸದಸ್ಯರ ಅಧಿಕಾರಾವಧಿ 3 ವರ್ಷಗಳದ್ದಾಗಿರುತ್ತದೆ.<br><br>ಪ್ರಸ್ತುತ ಸದರಿಯವರ ಅಧಿಕಾರಾವಧಿ 16ನೇ ಜೂನ್-2022ಕ್ಕೆ ಮುಕ್ತಾಯವಾಗುತ್ತದೆ. |
| 2 | ಚಿತ್ರಕಲಾ ಪರಿಷತ್ತಿನ ಅಧ್ಯಕ್ಷರ ಹಾಗೂ ಇತರೆ ಪದಾಧಿಕಾರಿಗಳ ಚುನಾವಣೆ ನಡೆಯುವುದು ಯಾವಾಗ ಹಾಗೂ ಈ ಚುನಾವಣೆಗೆ ಮತದಾರರನ್ನು ನೋಂದಾಯಿಸುವ ಪ್ರಕ್ರಿಯೆ ಬಗ್ಗೆ ಮಾಹಿತಿ ನೀಡುವುದು; | ಪ್ರಸ್ತುತ ಅಧಿಕಾರಾವಧಿ 16ನೇ ಜೂನ್-2022ಕ್ಕೆ ಕೊನೆಗೊಳ್ಳಲಿದ್ದು, ತದ ನಂತರದಲ್ಲಿ ಚುನಾವಣಾ ಪ್ರಕ್ರಿಯೆನ್ನು ಉಪನಿಬಂಧಕರು ಹಾಗೂ ಸಂಘಗಳ ಜಿಲ್ಲಾ ಸಹಕಾರ ಸಂಘಗಳ ನೋಂದಣಾಧಿಕಾರಿಯವರು ಚುನಾವಣಾ ಪ್ರಕ್ರಿಯೆಯನ್ನು ನಡೆಸುತ್ತಾರೆ. ಕರ್ನಾಟಕ ಚಿತ್ರಕಲಾ ಪರಿಷತ್ತಿನ ಹಾಲಿ ನೋಂದಾಯಿತ ಸದಸ್ಯರು ಮತದಾರಾಗಿರುತ್ತಾರೆ ಹಾಗೂ ಮತದಾನದ ಹಕ್ಕು ಹೊಂದಿರುತ್ತಾರೆ. |
| 3. | ಚಿತ್ರಕಲಾ ಪರಿಷತ್ತಿನ ಅಧ್ಯಕ್ಷರಿಗೆ ಸಿಗುವ ಸಂಬಳ, ಭತ್ಯೆ ಹಾಗೂ ಇನ್ನಿತರ ಸೌಲಭ್ಯಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು; | ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷರ ಹುದ್ದೆಯು ಗೌರವಾನ್ವಿತ ಸೇವೆಯಾಗಿರುತ್ತದೆ. ಸಂಬಳ ಮತ್ತು ಇತರ ಸೌಲಭ್ಯಗಳು ಇರುವುದಿಲ್ಲ. ಎಲ್ಲಾ ಸದಸ್ಯರಿಗೆ ನೀಡುವಂತೆ ಅಧ್ಯಕ್ಷರಿಗೂ ಸಹ ಮಾಸಿಕ ಪ್ರಯಾಣ ಭತ್ಯೆ ರೂ. 1000/-ಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಆದರೆ ಹಾಲಿ ಅಧ್ಯಕ್ಷರು ಯಾವುದೇ ಭತ್ಯೆಯನ್ನು ಪಡೆಯುತ್ತಿರುವುದಿಲ್ಲ. |

2..

<table>
<tr>
<td>4.</td>
<td>ಕಳೆದ 2 ವರ್ಷಗಳಲ್ಲಿ ಕರ್ನಾಟಕ ಚಿತ್ರಕಲಾ ಪತಿಷತ್ತಿಗೆ ನೀಡಿದ ಅನುದಾನವೆಷ್ಟು; (ಸಂಪೂರ್ಣ ವಿವರವನ್ನು ನೀಡುವುದು)</td>
<td>ರಾಜ್ಯ ಸರ್ಕಾರವು 2018-19 ಮತ್ತು 2019-20ನೇ ಸಾಲಿನಲ್ಲಿ ಸಿಬ್ಬಂದಿಗಳ ವೇತನಾನುದಾನ, ಚಿತ್ರಸಂತೆ ಕಾರ್ಯಕ್ರಮಕ್ಕೆ ನೀಡಿರುವ ಅನುದಾನ ವಿವರಗಳು ಈ ಕೆಳಕಂಡಂತಿದೆ.<br>
<table>
<tr><th>ಕ್ರ.ಸಂಖ್ಯೆ</th><th>ವಿವರ</th><th>2018-19</th><th>2019-20</th></tr>
<tr><td>1</td><td>ಸಿಬ್ಬಂದಿಗಳ ವೇತನಾನುದಾನ</td><td>1,41,16,509/-</td><td>1,76,38,588/-</td></tr>
<tr><td>2</td><td>ಚಿತ್ರಸಂತೆ ಕಾರ್ಯಕ್ರಮ</td><td>20,00,000/-</td><td>---</td></tr>
</table>
</td>
</tr>
</table>

**ಸಂಖ್ಯೆ:ಇಡಿ/ 351 /ಯುಆರ್‌ಸಿ/2021**

**(ಡಾ|| ಅಶ್ವತ್ ನಾರಾಯಣ ಸಿ.ಎನ್)**

ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು.